# ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು - 572 103, ದೂರವಾಣಿ ಸಂಖ್ಯೆ 0816-2272280

**email : tudatmk2009@yahoo.co.in, website : tuda.co.in.**

ಕ್ರಮಾಂಕ ಟಿಯುಡಿಎ/ಸಿಎಎಸ್ಎ/01/2016-17 **ಪ್ರಕಟಣೆ** ದಿನಾಂಕ : 02-07-2016

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರವು 55 ಸಂಖ್ಯೆಯ ನಾಗರೀಕ ಸೌಕರ್ಯದ ನಿವೇಶನಗಳನ್ನು ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಉದ್ದೇಶಿಸಿದೆ ಎಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಲಾಗಿದೆ. ಆಸಕ್ತ ಸಂಘ ಸಂಸ್ಥೆಗಳವರು ನಿಬಂಧನೆಗಳಿಗನುಸಾರವಾಗಿ ಅರ್ಜಿ ಸಲ್ಲಿಸಿಕೊಳ್ಳಬಹುದಾಗಿರುತ್ತದೆ.

**ಕಾಯ್ದಿರಿಸಿದ ಉದ್ದೇಶ** : ಮಾರುಕಟ್ಟೆ, ಅಂಚೆ ಕಛೇರಿ, ಬ್ಯಾಂಕ್, ಬಸ್‌ಸ್ಟಾಂಡ್, ಬಸ್ ಡಿಪೋ, ನ್ಯಾಯಬೆಲೆ ಅಂಗಡಿ, ಹಾಲಿನ ಕೇಂದ್ರ, ಶಾಲೆ, ಚಿಕಿತ್ಸಾಲಯ, ಹೆರಿಗೆ ಆಸ್ಪತ್ರೆ, ಶಿಶುಪಾಲನಾ ಕೇಂದ್ರ, ಗ್ರಂಥಾಲಯ, ವ್ಯಾಯಾಮ ಶಾಲೆ, ಮನರಂಜನಾ ಕೇಂದ್ರ, ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆ ಕೇಂದ್ರ, ಮನೋಭಾವದ ಸೇವೆಗಳಿಗಾಗಿ ಒಂದು ಕೇಂದ್ರ, ಪೋಲೀಸ್ ಠಾಣೆ, ಪ್ರಾದೇಶಿಕ ಕಛೇರಿ, ಸ್ಥಳೀಯ ಪ್ರಾಧಿಕಾರ, ಕ.ನ.ನೀ.ಸ. ಮತ್ತು ಒ.ಚ.ಮಂಡಳಿ, ಕ.ವಿ.ಮಂಡಳಿ, ಸರ್ವೀಸ್ ಸ್ಟೇಷನ್ ಇತರೆ

**ಖಾಲಿ ಅರ್ಜಿಗಳನ್ನು ದಿನಾಂಕ 04 -07-2016 ರಿಂದ ನೀಡಲಾಗುವುದು.**
**ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸುವ ಕಡೆ ದಿನಾಂಕ 05 -08-2016**

**ಸೂಚನೆ :**

1) ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆಯನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ 1987 ಮತ್ತು ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ ನಿಯಮಗಳು 1991 ರ ರೀತ್ಯಾ ಹಂಚಲಾಗುವುದು.
2) ಅರ್ಜಿಯೊಂದಿಗೆ ನಾಗರೀಕ ಸೌಕರ್ಯ ನಿವೇಶನ ಹಂಚಿಕೆಗೆ ಸಂಬಂಧಿಸಿದ ನಿಬಂಧನೆಗಳ ಪಟ್ಟಿಯನ್ನು ಪಡೆಯತಕ್ಕದ್ದು.
3) ಪರಿಶಿಷ್ಠ ಜಾತಿ / ವರ್ಗದ ಸಂಸ್ಥೆಗಳಿಗೆ ನಿಯಮ 3(2) ರಂತೆ ಸ್ವೀಕರಿಸಿದ ಅರ್ಜಿಗಳಲ್ಲಿ ಮೀಸಲಾತಿ ಅನ್ವಯ ಆದ್ಯತೆ ನೀಡಿ ಹಂಚಿಕೆ ಮಾಡಲಾಗುವುದು.
4) ಯಾವುದೇ ಸರ್ಕಾರಿ ಇಲಾಖೆಗಳಿಗೆ ನಿವೇಶನಗಳು ಅಗತ್ಯವಿದ್ದಲ್ಲಿ ಅರ್ಜಿ ಸಲ್ಲಿಸುವುದು. ಸರ್ಕಾರಿ ಕಛೇರಿಗಳ ಬೇಡಿಕೆ ಪೂರೈಸಿದ ನಂತರ ಉಳಿದ ನಿವೇಶನಗಳನ್ನು ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.
5) ಹಂಚಿಕೆ ನಿಯಮ ಹಾಗೂ ಷರತ್ತುಗಳು, ಅರ್ಜಿ ನಮೂನೆ, ನಿವೇಶನದ ಸ್ಥಳ, ವಿಸ್ತೀರ್ಣ, ಅರ್ಜಿಯೊಂದಿಗೆ ಸಲ್ಲಿಸಬೇಕಾದ ಮೊತ್ತ, ನೊಂದಣಿ ಶುಲ್ಕ ಹಾಗೂ ನಿವೇಶನವನ್ನು ಕಾಯ್ದಿರಿಸಿದ ಉದ್ದೇಶವನ್ನು ಕಛೇರಿಯ ಸೂಚನಾ ಫಲಕ ಹಾಗೂ ವೆಬ್ ಸೈಟ್ WWW.tuda.co.in ನಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು

ಅಧ್ಯಕ್ಷರು,
ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.

# ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ ಷರತ್ತುಗಳು

1. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ನಿಯಮ (ನಾಗರೀಕ ಸೌಕರ್ಯ ನಿವೇಶನ ಹಂಚಿಕೆ) 1991 ಕಲಂ 10 (1) ರಂತೆ ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆಯು 30 ವರ್ಷಗಳಿಗೆ ಮೀರದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗುವುದು.
2. ನಾಗರೀಕ ಸೌಕರ್ಯ ನಿವೇಶನಗಳನ್ನು ಹಂಚಿಕೆ ಪಡೆದಂತಹ ಸಂಘ-ಸಂಸ್ಥೆಗಳು ಹಂಚಿಕೆಯ ನೋಟಿಸನ್ನು ಸ್ವೀಕರಿಸಿದ ದಿನಾಂಕದಿಂದ 90 ದಿನಗಳೊಳಗೆ ಬಾಕಿ ಗುತ್ತಿಗೆಯ ಹಣವನ್ನು ಒಂದೇ ಇಡಿಗಂಟಿನಲ್ಲಾಗಲೀ ಅಥವಾ ವಾರ್ಷಿಕ ಗುತ್ತಿಗೆ ಹಣದ ಪ್ರಥಮ ವಾರ್ಷಿಕ ಕಂತಿನ ಹಣವನ್ನು ಪಾವತಿಸತಕ್ಕದ್ದು.
3. ಹಂಚಿಕೆ ನೋಟಿಸು ಜಾರಿಯಾದ 90 ದಿನಗಳೊಳಗೆ ಗುತ್ತಿಗೆ ಹಣ ಪಾವತಿಸದಿದ್ದಲ್ಲಿ ಮುಂದಿನ 60 ದಿನಗಳು ವಿಸ್ತೃತ ಅವಧಿಯಾಗಿದ್ದು, ಗುತ್ತಿಗೆ ಹಣದ ಮೊಬಲಗಿನ ಶೇ. 12 ರಷ್ಟು ಬಡ್ಡಿ ಸಮೇತ ಪಾವತಿಸತಕ್ಕದ್ದು, ಮೇಲ್ಕಂಡಂತೆ ಕಾಲಾವಧಿ ಅನುಸರಿಸಿ ಗುತ್ತಿಗೆ ಹಣ ಪಾವತಿಸದಿದ್ದಲ್ಲಿ ಯಾವುದೇ ನೋಟಿಸ್ ವಗೈರೆ ಕೊಡದೆ ನಾಗರೀಕ ಸೌಕರ್ಯ ನಿವೇಶನ ಹಂಚಿಕೆಯನ್ನು ರದ್ದುಪಡಿಸುವುದರ ಜೊತೆಗೆ ನಿಮ್ಮ ಸಂಘ-ಸಂಸ್ಥೆಯಿಂದ ಕಟ್ಟುವ ನೋಂದಣಿ ಶುಲ್ಕ ಮತ್ತು ಪ್ರಾರಂಭಿಕ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
4. ಮೇಲ್ಕಂಡಂತೆ ಕಾಲವರಿತು ಗುತ್ತಿಗೆ ಹಣವನ್ನು ಪಾವತಿಸಿದ ಕೂಡಲೇ ಗುತ್ತಿಗೆ ಒಪ್ಪಂದದ ಪ್ರಪತ್ರ 111 ರಲ್ಲಿ ಬರೆದುಕೊಟ್ಟು ಗುತ್ತಿಗೆ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು, ಹಾಗೂ 45 ದಿನಗಳೊಳಗೆ ನೋಂದಣಿ ಮಾಡಿಸಿಕೊಳ್ಳತಕ್ಕದ್ದು ತಪ್ಪಿದಲ್ಲಿ ನೋಂದಣಿ ಶುಲ್ಕ ಮತ್ತು ಪ್ರಾರಂಭಿಕ ಠೇವಣಿ ಹಣದಲ್ಲಿ ಪ್ರಾಧಿಕಾರದ ವೆಚ್ಚವನ್ನು ತುಂಬಿಕೊಳ್ಳಲಾಗುತ್ತದೆ ಹಾಗೂ ಹಂಚಿಕೆಯನ್ನು ರದ್ದುಗೊಳಿಸಲಾಗುತ್ತದೆ.
5. ನಾಗರೀಕ ಸೌಕರ್ಯ ನಿವೇಶನವನ್ನು ಗುತ್ತಿಗೆ ಮೂಲಕ ನೋಂದಣಿ ಮಾಡಿಸಿಕೊಂಡ ದಿನದಿಂದ ಗುತ್ತಿಗೆಯ ಅವಧಿ ಪ್ರಾರಂಭವಾಗುತ್ತದೆ.
6. ನೋಂದಣಿ ಆದ ದಿನಾಂಕದಿಂದ ಸಂಘ-ಸಂಸ್ಥೆಯು ವಾರ್ಷಿಕ ಕಂತನ್ನು ಗುತ್ತಿಗೆ ಒಪ್ಪಂದಕ್ಕೆ ಅನುಸಾರವಾಗಿ ಪಾವತಿಸತಕ್ಕದ್ದು.
7. ನಾಗರೀಕ ಸೌಕರ್ಯ ನಿವೇಶನ ಹಂಚಿಕೆಯಾದ ಸಂಘ-ಸಂಸ್ಥೆ ಗುತ್ತಿಗೆ ಒಪ್ಪಂದ ಪತ್ರದ ನೋಂದಣಿ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗೆ ಪ್ರಾಧಿಕಾರವು ಯಾವುದೇ ಲಿಖಿತ ಆದೇಶದ ಮೂಲಕ ಅನುಮತಿಸಬಹುದಾಂಥಹ ಉದ್ದೇಶಗಳನ್ನು ಅನುಸರಿಸಿ 10 ವರ್ಷಗಳ ಒಳಗೆ ಕಟ್ಟಡಗಳನ್ನು ಕಟ್ಟತಕ್ಕದ್ದು ಸದರಿ ಅವಧಿಯೊಳಗೆ ಕಟ್ಟಡವನ್ನು ನಿರ್ಮಿಸದಿದ್ದಲ್ಲಿ ಹಂಚಿಕೆಯನ್ನು ರದ್ದುಪಡಿಸಲಾಗುತ್ತದೆ ಹಾಗೂ ನಿವೇಶನದಿಂದ ಹೊರದೂಡಲಾಗುತ್ತದೆ ಹಾಗೂ ಪಾವತಿಸಲಾದ ಗುತ್ತಿಗೆಯ ಮೊಬಲಗಿನ ಒಟ್ಟು ಹಣದಲ್ಲಿ ಶೇ. 12 1/2 ರಷ್ಟು ಮುಟ್ಟುಗೋಲು ಹಾಕಿಕೊಂಡು ಬಾಕಿ ಹಣವನ್ನು ಮರು ಪಾವತಿಸಲಾಗುತ್ತದೆ.
8. ಸಂಘ -ಸಂಸ್ಥೆಯು ನಾಗರೀಕ ಸೌಕರ್ಯ ನಿವೇಶನ ಗುತ್ತಿಗೆ ಮೂಲಕ ಸ್ವಾಧೀನ ತೆಗೆದುಕೊಂಡ ದಿನಾಂಕದಿಂದ ನಿವೇಶನ ಮತ್ತು ಅದರ ಮೇಲೆ ನಿರ್ಮಿಸಬಹುದಾದ ಯಾವುದೇ ಕಟ್ಟಡ ವಗೈರೆ ಇತ್ಯಾದಿಗಳಿಗೆ ತೆರಿಗೆ ಮತ್ತು ಶುಲ್ಕಗಳನ್ನು ಮತ್ತು ಉಪಕರಣಗಳನ್ನು ಸಂದಾಯ ಮಾಡಲು ಬದ್ಧರಾಗಿರತಕ್ಕದ್ದು.
9. ಸಂಘ-ಸಂಸ್ಥೆಗಳಿಗೆ ಹಂಚಿಕೆ ಮಾಡಲಾದ ನಿವೇಶನ ಗುತ್ತಿಗೆಯಾಗಿದ್ದು, ನಿವೇಶನ ಮಾಲೀಕತ್ವ ಹೊಂದಲು ಬರುವುದಿಲ್ಲ.
10. ಗುತ್ತಿಗೆ ಆಧಾರದ ಮೇಲೆ ಕೊಟ್ಟಿದ್ದ ನಾಗರೀಕ ಸೌಕರ್ಯ ನಿವೇಶನವನ್ನು ಬೇರೆ ಉದ್ದೇಶಕ್ಕಾಗಲೀ, ಒಳ ಗುತ್ತಿಗೆ ನೀಡುವುದಕ್ಕಾಗಲೀ, ಪರಭಾರೆ ಮಾಡುವುದಕ್ಕಾಗಲೀ ಉಪ ವಿಭಜನೆ ಮಾಡುವುದಕ್ಕಾಗಲೀ ಹಾಗೂ ಸಾಲ ವಗೈರೆ ಪಡೆಯಲು ಬರುವುದಿಲ್ಲ.
11. ನಾಗರೀಕ ಸೌಕರ್ಯ ನಿವೇಶನವನ್ನು ಯಾವ ಉದ್ದೇಶಕ್ಕಾಗಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.
12. ಕಾಲವರಿತು ಗುತ್ತಿಗೆ ನವೀಕರಿಸದಿದ್ದಲ್ಲಿ ಅಥವಾ ಗುತ್ತಿಗೆ ಅವಧಿಗೆ ಮುಂಚೆ ಒಪ್ಪಂದ ಕೊನೆಗೊಳಿಸದಿದ್ದಲ್ಲಿ ನಿವೇಶನ ಹಾಗೂ ಅದರಲ್ಲಿರುವ ಕಟ್ಟಡಗಳನ್ನು ಪ್ರವೇಶಿಸುವ ಮತ್ತು ಸ್ವಾಧೀನತೆಯನ್ನು ಪಡೆಯುವ ಹಕ್ಕನ್ನು ಪ್ರಾಧಿಕಾರ ಹೊಂದಿರುತ್ತದೆ.
13. ಸಂಘ-ಸಂಸ್ಥೆಯು ಗುತ್ತಿಗೆ ಒಪ್ಪಂದದ ಮೇಲಿನ ಷರತ್ತುಗಳನ್ನೊಳಗೊಂಡಂತೆ ಸಂದರ್ಭಾನುಸಾರ ಪ್ರಾಧಿಕಾರ ಅಥವಾ ಪುರಸಭೆಯ ಕಾಲಾನುಕ್ರಮದಲ್ಲಿ ಜಾರಿಯಲ್ಲಿರುವ ಇತರೆ ವಿಧಿ ವಿಧಾನ, ನಿಯಮಗಳನ್ನು ಪಾಲಿಸತಕ್ಕದ್ದು.
14. ಸಂಘ-ಸಂಸ್ಥೆಗಳು ನೀಡಿರುವ ಯಾವುದೇ ಮಾಹಿತಿಗಳು ಸರಿ ಇಲ್ಲವೆಂದು ಕಂಡುಬಂದಲ್ಲಿ ಹಂಚಿಕೆ ಮಾಡಲಾದ ನಿವೇಶನವನ್ನು ಯಾವುದೇ ಕಾರಣ ಕೊಡದೆ ಹಂಚಿಕೆಯನ್ನು ರದ್ದುಪಡಿಸುವ ಅಧಿಕಾರ ಪ್ರಾಧಿಕಾರ ಹೊಂದಿರುತ್ತದೆ.
15. ಪರಿಶಿಷ್ಟ ಜಾತಿ / ವರ್ಗದ ಸಂಸ್ಥೆಗಳಿಗೆ ನಿಯಮ 3(2) ರಂತೆ ಸ್ವೀಕರಿಸಿದ ಅರ್ಜಿಗಳಲ್ಲಿ ಮೀಸಲಾತಿ ಅನ್ವಯ ಆದ್ಯತೆ ನೀಡಿ ಹಂಚಿಕೆ ಮಾಡಲಾಗುವುದು.

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ
ತುಮಕೂರು

# ನಾಗರೀಕ ಸೌಕರ್ಯ ನಿವೇಶನಗಳ ಅರ್ಜಿ ಸಲ್ಲಿಸಲು ಅರ್ಹತೆಗಳು

1. ಅರ್ಜಿಗಳನ್ನು ಸಲ್ಲಿಸುವುದಕ್ಕಿಂತಲೂ ಮುಂಚೆ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಸಿ ನೋಂದಣಿ ಶುಲ್ಕ ಪಾವತಿಸಿ ಪ್ರಾರಂಭಿಕ ಠೇವಣಿಯೊಂದಿಗೆ ನಿಗಧಿತ ಪ್ರಪತ್ರ –11 ರಲ್ಲಿ ಅರ್ಜಿ ಸಲ್ಲಿಸಬೇಕು.

2. ಈ ಹಿಂದೆ ನಾಗರೀಕ ಸೌಕರ್ಯ ನಿವೇಶನ ಕೋರಿ ನೋಂದಾಯಿಸಿ ಅರ್ಜಿಗಳನ್ನು ಹಾಕಿಕೊಂಡಿದ್ದವರು ಈ ಪ್ರಕಟಣೆಯನ್ವಯ ಹೊಸದಾಗಿ ನೋಂದಣಿ ಮಾಡಿಸಿ ಹೊಸದಾಗಿ ಅರ್ಜಿ ಹಾಕಿಕೊಳ್ಳತಕ್ಕದ್ದು. ಈ ಹಿಂದೆ ಸಲ್ಲಿಸಿದ್ದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

3. ಯಾವುದೇ ಸಂಸ್ಥೆಯು ಒಂದಕ್ಕಿಂತ ಹೆಚ್ಚು ಸಿಎ ನಿವೇಶನಗಳಿಗೆ ಅರ್ಜಿ ಸಲ್ಲಿಸಲು ಅಪೇಕ್ಷಿಸಿದಲ್ಲಿ ಅ ಸಂಸ್ಥೆಯು ಪ್ರತಿಯೊಂದು ನಿವೇಶನಕ್ಕು ಪ್ರತ್ಯೇಕವಾಗಿ ನೊಂದಾಯಿಸಿ ಹಾಗೂ ಪ್ರತ್ಯೇಕವಾಗಿ ಪ್ರಾರಂಭಿಕ ಠೇವಣಿಯೊಂದಿಗೆ ಅರ್ಜಿ ಸಲ್ಲಿಸಬೇಕು.

4. ನಿಯಮಗಳಿಗೆ ಒಳಪಟ್ಟು ನೊಂದಾಯಿಸಿಕೊಂಡ ಸಂಸ್ಥೆಯೊಂದಕ್ಕೆ ಸಿಎ ನಿವೇಶನವನ್ನು ಗುತ್ತಿಗೆ ಆಧಾರದ ಮೇಲೆ ಮಾತ್ರ ಪ್ರಾಧಿಕಾರದಿಂದ ಹಂಚಲಾಗುವುದು.

5. ಸಂಸ್ಥೆ ಎಂದರೆ 1960 ರ ಕರ್ನಾಟಕ ಸಂಘ ಸಂಸ್ಥೆಗಳೆ ನೊಂದಣಿ ಕಾಯ್ದೆಯಡಿಯಲ್ಲಿ ನೊಂದಾಯಿಸಿಕೊಂಡಿರುವ ಸಂಸ್ಥೆ, ಸಂಘ ಅಥವಾ ಒಂದು ಸಂಘ ಸಂಸ್ಥೆ ಅಥವಾ 1959 ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಮೇರೆಗೆ ನೊಂದಾಯಿತವಾದ ಸಹಕಾರಿ ಸಂಘ ಅಥವಾ ಯಾವುದೇ ಧರ್ಮದಾಯಿಕ, ಶೈಕ್ಷಣಿಕ ಅಥವಾ ಧಾರ್ಮಿಕ ಉದ್ದೇಶಕ್ಕಾಗಿ ಪೂರ್ಣವಾಗಿ ಸೃಜಿಸಲಾದ ಒಂದು ನ್ಯಾಸ.

6. ಅರ್ಜಿದಾರನು ವಾರ್ಷಿಕ ವರದಿ ಮತ್ತು ಕಳೆದ ಮೂರು ವರ್ಷಗಳ ಲೆಕ್ಕ ಪರಿಶೋಧನೆಯಾದ ವರದಿ, ನಿವೇಶನ ಹಂಚಿಕೆ ಬೇಡಿಕೆ ಬಗ್ಗೆ ನಿರ್ಣಯಗಳು ಇತ್ಯಾದಿಗಳನ್ನು ಅರ್ಜಿಯ ಜೊತೆ ಸಲ್ಲಿಸಬೇಕು.

7. ಸಿಎ ನಿವೇಶನಕ್ಕಾಗಿ ಅರ್ಜಿ ಸಲ್ಲಿಸುವ ಸಂಸ್ಥೆಯು ತಾನು ಪಡೆಯುವ ನಿವೇಶನ ಯಾವ ಉದ್ದೇಶದ ಕಟ್ಟಡ ನಿರ್ಮಾಣಕ್ಕೆ ಆರ್ಥಿಕ ಸಂಪನ್ಮೂಲ /ಈಗಿನ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಬ್ಯಾಂಕ್ ವ್ಯವಹಾರದ ದೃಢೀಕೃತ ಪ್ರತಿ ಲಗತ್ತಿಸುವುದು.

8. ಸದರಿ ಸಂಸ್ಥೆಯು ಸಾಮಾಜಿಕ ಕ್ಷೇತ್ರದಲ್ಲಿ ಹಮ್ಮಿಕೊಂಡ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡುವುದು.

(signature)
ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ
ತುಮಕೂರು